ಹೆಚ್ಚು ತಿರುಗಾಡಿ ಆಯಾಸ ಮಾಡಿಕೊಂಡಿರಾ? ಮೈಗೆ ಸರಿಯಿಲ್ಲವೇ, ರಾಜವೈದ್ಯರಿಗೆ ಹೇಳಿ ಕಳಿಸಲೇ?' ಹತ್ತಿರ ಬಂದು ಕೇಳಿದಳು.

ಯಾರನ್ನೂ ಕರೆಸುವುದು ಬೇಡವೆಂದು ತಲೆ ಆಡಿಸುತ್ತಾ, 'ಛಲಾ...! ಇದು ದ್ರೌಪದಿ. ಎಷ್ಟೊಂದು ಕರುಣೆಯಿಂದ ಕೇಳುತ್ತಾಳೆ. ಮೊದಲಿಂದಲೂ ಈಕೆ ಹೀಗೆಯೇ... ಅಂತಃಕರುಣಿ. ಹಿರಿಯರನ್ನು, ಹಿರಿಯರ ಮಾತನ್ನು ತೆಗೆದುಹಾಕದೇ ಗೌರವದಿಂದ ಕಂಡವಳು. ಇಲ್ಲದಿದ್ದರೆ, ಈಕೆಯ ಸ್ವಯಂವರದ ದಿನವೇ, ಜಗದೇಕವೀರ ಅರ್ಜುನನಿಗೆ ಮಾತ್ರ ಗೆಲುವಾಗಿ ಬಂದವಳ ಇಂಗಿತವನ್ನು ಅರಿಯಲು ಪ್ರಯತ್ನಿಸದೇ ನಾನು, ಐವರೂ ಸೇರಿ ಪುನಃ ಮದುವೆಯಾಗಿರಿ ಎಂದಾಗ ಪ್ರತಿಭಟಿಸದೆ ಸುಮ್ಮಗಿರುತ್ತಿದ್ದಳೇ?'

ಸೊಸೆಯ ಮೇಲಿನ ಅಭಿಮಾನಕ್ಕೆ ಮನಸ್ಸು ಉಬ್ಬಿತು. ಪಾಪ ಕುಂತಿಗೆ ಗೊತ್ತಿಲ್ಲ, ಆ ಅಭಿಮಾನದ ಗುಳ್ಳೆ ಕ್ಷಣ ಮಾತ್ರದಲ್ಲಿ ಒಡೆಯುತ್ತದೆಂದು.

'ನಿಮಗೆ ಮತ್ತೊಂದು ಸತ್ಯ ಗೊತ್ತಾ ಅತ್ತೆ? ಅಂದು ಸ್ವಯಂವರಕ್ಕೆ ಬಂದವರನ್ನು ಕಂಡಕೂಡಲೇ ನನಗೆ ಮೊದಲು ಆಸೆಯಾಗಿದ್ದು, ಕುರುವಂಶದ ಯುವರಾಜ ಸುಯೋಧನನೊಡನೆ ಬಂದಿದ್ದ ಆ ತೇಜಸ್ವಿಯ ಮೇಲೆ. ಆತ ನಿಮ್ಮ ಮೊದಲ ಪುತ್ರನಾದ ಕರ್ಣನೇ ಎಂದು ನನಗಾಗ ಗೊತ್ತಿರಲಿಲ್ಲ. ಗೊತ್ತಿದ್ದರೆ, ನನ್ನ ಐವರು ಮಕ್ಕಳನ್ನೂ ವರಿಸು ಎಂದಾಗಲೇ ನಾನು ಕರ್ಣನನ್ನು ಬಿಟ್ಟಿರಲ್ಲಾ ಏಕೆ ಎಂದು ನಿಮ್ಮನ್ನು ಕೇಳುತ್ತಿದ್ದೆ. ಹೌದು ಹಾಗೆ ಕೇಳದೇ ಬಿಡುತ್ತಿರಲಿಲ್ಲ.'

ಈ ಹೊತ್ತಿಗೆ ಆ ಮಾತು ಅನುಚಿತವಾಗಿತ್ತು ಮತ್ತು ಬೇಕೆಂದೇ ಹೆಚ್ಚೇ ಮೊನಚಾಗಿತ್ತು. ಕರ್ಣನ ಹೆಸರಿನ ಮಾತ್ರದಿಂದಲೇ ಕುಂತಿಯ ಮಾತೃಹೃದಯ ನೊಂದಿತು.

'ಛೇ, ಕರ್ಣನ ಜನ್ಮರಹಸ್ಯ ಇವಳಿಗೂ ತಿಳಿಯಿತೆ? ನಾನು ಕೃಷ್ಣವಿಧುರರೊಡನೆ ಮಾತನಾಡುವಾಗ ಕೇಳಿಸಿಕೊಂಡವರಾರು? ಹಾಗಾದರೆ, ಅರಮನೆಯ ಗೋಡೆ, ಕಿಟಕಿ, ಬಾಗಿಲುಗಳಿಗೆ ಕಿವಿಗಳಿವೆ ಎನ್ನುವುದು ಸುಳ್ಳಲ್ಲ. ಇರಲಿ, ಆ ಸತ್ಯವನ್ನು ಮುಂದೊಮ್ಮೆ ನಾನೇ ಲೋಕಕ್ಕೆ ತಿಳಿಸಬೇಕಿತ್ತಲ್ಲಾ. ಆ ಕ್ಷಣದ ಆತಂಕ ಈಗ ಅಷ್ಟರಮಟ್ಟಿಗೆ ಕಡಿಮೆಯಾದಂತೆ ಆಯಿತು. ಈ ಮುದಿ ಕುಂತಿ, ತನ್ನ ಯೌವನದಲ್ಲಿ ಮಾಡಿಕೊಂಡ ಪ್ರಮಾದಕ್ಕೆ ಈಗಲೂ ಹೆದರಬೇಕೆ? ಸಾಮಾಜಿಕ ಕಟ್ಟಳೆಗಳನ್ನು ನಾನಾಗಲೇ ಮೀರಿದ್ದೇನಲ್ಲಾ. ಈಗೇಕೆ ಅದರ ಬಗ್ಗೆ ಆತಂಕ?'

ಲೋಕದ ರಿವಾಜುಗಳಿಗೆ ನಿರ್ಲಿಪ್ತಳಾಗಿರಬೇಕು ಎಂದುಕೊಂಡಿದ್ದ ಕುಂತಿಯನ್ನು ಮಾತೃಪಾಶ ಸುಮ್ಮನೆ ಬಿಡುವುದಿಲ್ಲ. ಜಗ್ಗಿ ಎಳೆದೇ ಎಳೆಯುತ್ತದೆ.

'ಈಗ ಕರ್ಣನ ಪ್ರಸ್ತಾಪದ ಅಗತ್ಯ ಏನಿತ್ತು? ನಿಲ್ಲಿಸು ದ್ರೌಪದಿ ಎನ್ನಲೆ? ನಾನು ನಿಲ್ಲಿಸೆಂದ ಮಾತ್ರಕ್ಕೆ ಈಕೆ ನಿಲ್ಲಿಸುವವಳೇ! ಇಲ್ಲ, ಮೊನ್ನೆ ತಾನೇ ಗಂಡಸರೇ ತುಂಬಿದ್ದ ಸಭೆಯ ಮಧ್ಯ ಅವಮಾನಿತಳಾಗಿ ಬಂದಿದ್ದಾಳೆ. ಗಂಡಸರ ಕಾಮದ ಹಸಿವಿನ ಕಾಮಾಲೆ ಕಣ್ಣುಗಳಿಗೆ ಆಹಾರವಾಗಿದ್ದಾಳೆ. ಯಾರು ಯಾರು ಯಾವ ಯಾವ ಅಂಗಾಂಗಗಳನ್ನು ಚಪ್ಪರಿಸಿ ತಿಂದರೋ. ಯಾರ ಕಣ್ಣನೋಟ ಎಲ್ಲಿ ಇರಿದಿತ್ತೋ. ಹೇಗೆ ಸಹಿಸಿದಳೋ ತಾಯಿ... ಊಹಿಸಲೇ ನನಗೆ ಅಸಹ್ಯವೆನಿಸುತ್ತದೆ. ಇನ್ನು ಅವಮಾನಕ್ಕೆ ಗುರಿಯಾದ ಇವಳ ಸ್ಥಿತಿ ಹೇಗಿರಬಹುದು? ಈ ನೋವು ಮತ್ತಾರಿಗೆ ತಿಳಿಯಬೇಕು? ಅರಮನೆಯಲ್ಲಿ ಈಕೆಗೆ ಮಾತನಾಡಲು ನನ್ನ ಹೊರತು ಇನ್ನಾರಿದ್ದಾರೆ? ಸುಭದ್ರೆಯೇ? ಆಕೆ ಎದಿದ್ದರೂ ಸವತಿಯೇ! ಸದಾ ಒಂದು ಕಾಲು ತವರಿನಲ್ಲೇ ಇಟ್ಟಿರುತ್ತಾಳೆ. ದಾಸಿಯರೊಡನೆ ಇದನ್ನೆಲ್ಲಾ ಮಾತನಾಡುವಷ್ಟು ಸಲುಗೆ ತರವೇ? ಪಾಪ, ನನ್ನ ಸೊಸೆ ಮಾತನಾಡಲಿ, ಅವಳ ಮನದ ದುಗುಡದ ಮೋಡ ಮಾತಿನ ಗುಡುಗಿನಲ್ಲಿ ಡಿಕ್ಕಿ ಹೊಡೆದು, ಮಳೆಯಾಗಿ ಸುರಿದು ಹಗುರಾಗಲಿ'.

ಮಂದವಾಗಿ ಉರಿಯುತ್ತಿದ್ದ ನೀಲಾಂಜನದ ಜ್ಯೋತಿಯನ್ನೇ ದಿಟ್ಟಿಸುತ್ತಾ ಕುಂತಿ ಕುಳಿತಳು.

ಅತ್ತೆಯ ಮೌನ ದ್ರೌಪದಿಯನ್ನು ಮೆದುವಾಗಿಸಿತು. 'ಮಾತು ಅಗತ್ಯ ಮೀರಿ ಮೊನಚಾಯಿತೇನೋ..' ನಿಧಾನವಾಗಿ ಅವರ ಬಳಿ ಹೋದವಳೇ, ಕುಂತಿಯ ತೊಡೆಯ ಮೇಲೆ ತಲೆಯಿಟ್ಟು ಕುಳಿತಳು.

'ಅತ್ತೆ... ನಾವಿಬ್ಬರೂ ಒಂದೇ ದೋಣಿಯ ಪಯಣಿಗರು... ಹಾಗೆ ನೋಡಿದರೆ ನಿಮ್ಮ ದೋಣಿ ನೀವು ಹತ್ತುವಾಗಲೇ ಬಿರುಕುಬಿಟ್ಟಿತ್ತು. ಅದು ಹೇಗೋ ನೀವು ದಡ ಮುಟ್ಟಿದಿರಿ. ಆದರೆ, ನಾನು ಹತ್ತಿದ ದೋಣಿಗೆ ತಳವೇ ಇರಲಿಲ್ಲ, ನಾವಿಕನಂತೂ ಮೊದಲೇ ಇರಲಿಲ್ಲ. ಮದುವೆಯ ಮೊದಲ ದಿನವೇ ಅದು ಒಡೆದು ಚೂರಾಗಿತ್ತು. ಆದರೂ ಹೇಗೋ ಈಜಿ ದಡ ಸೇರಲು ಪ್ರಯತ್ನಿಸಿದೆ. ಸೋತ ಕೈ ಕಾಲುಗಳನ್ನು ಬಡಿಯುತ್ತಾ... ಈವರೆಗೂ ನಾನೊಂದು ಜೀವ, ಜೀವಂತ ಇದ್ದೇನೆಂದು ಜಗತ್ತಿಗೆ ಛಲದಿಂದ ತೋರಿಸಲು...'

ಕುಂತಿಯ ಬಲ ತೊಡೆಯು ಬಿಸಿಯಾಯಿತು.

'ಅರೆ, ದ್ರೌಪದಿ ಅಳುತ್ತಿರುವಳೇ!'

ಬಾಗಿ ದ್ರೌಪದಿಯನ್ನು ನೋಡಿದಳು. ಮುಚ್ಚಿದ ಕಣ್ಣೆವೆಯಿಂದ ಧಾರಾಕಾರ ಕಣ್ಣೀರು ಹರಿಯುತ್ತಿತ್ತು. ಮನದಾಳದಲ್ಲಿ ಅಪಾರ ವೇದನೆ ಇದ್ದರಷ್ಟೇ ಕಂಬನಿ ಹೀಗೆ ಸರಾಗ ಸುರಿಯುವುದೆಂದು ಕುಂತಿಗೆ ಸ್ವತಃ ಅನುಭವಿಸಿ ತಿಳಿದಿತ್ತು.

'ದ್ರೌಪದೀ, ಮುದ್ದು ಸೊಸೆಯೇ, ಹೀಗಾದರೂ ಮನದಣಿಯೆ ಅತ್ತು ಹಗುರಾಗು...' ಎಂದು ಮಿಸುಕಾಡದೆ ಕುಳಿತಳು.

ಅತ್ತು, ಅರೆಗಳಿಗೆ ಸಮಾಧಾನ ಪಡೆದು, ಕುಂತಿಯ ಮಡಿಲು ಬಿಟ್ಟು ಮೇಲೆದ್ದ ದ್ರೌಪದಿ ನಾಕಾರು ಹೆಜ್ಜೆ ನಡೆದು ಕುಂತಿ ದಿಟ್ಟಿಸುತ್ತಿದ್ದ ನೀಲಾಂಜನದ ಬಳಿ ನಿಂತಳು.

'ನಾನೂ ಸಹ ನಿಮ್ಮಂತೆಯೇ ಎಂದು ಲೋಕಕ್ಕೆ ತೋರಿಸಬೇಕೆಂದಿದ್ದಿರಿ ಅಲ್ಲವೇ ಅತ್ತೆ? ಈ ಸಮಾಜ, ಒಬ್ಬ ರಾಜನಿಗೆ ನೂರಾರು ರಾಣಿಯರನ್ನು, ದಾಸಿಯರನ್ನು ಭೋಗಕ್ಕೆ ನೀಡಲು ಸಿದ್ಧವಿರುತ್ತದೆ. ಆದರೆ, ಒಬ್ಬ ರಾಣಿಗೆ ಈ ಅವಕಾಶವನ್ನು ಧಾರಾಳ ನೀಡುತ್ತದೆಯೇ? ಇಲ್ಲ ಅಲ್ಲವೇ? ಆದರೆ ನೀವದಕ್ಕೆ ಮೊದಲ ಅಪವಾದವಾಗಿ ನಿಂತಿದ್ದಿರಿ. ಆದರೂ ನೀವದನ್ನು ಲೋಕದ ಅಪವಾದಕ್ಕೆ ಗುರಿಯಾಗದ ರೀತಿಯಲ್ಲಿ, ಋಷಿಮುನಿಗಳ ಹಾರೈಕೆಯಲ್ಲಿ, ಪತಿಯ ಒಪ್ಪಿತದ ನೆರಳಲ್ಲಿ, ದೇವ–ಮಾನವ ಸಂಕರ, ಸಂಪರ್ಕದ ಹೆಸರಿನಲ್ಲಿ ಬಹಳ ನಾಜೂಕಾಗಿ ಲೋಕಮಾನ್ಯವಾಗುವಂತೆ ನೋಡಿಕೊಂಡಿರಿ. ಭೇಷ್ ಅತ್ತೆ ನಿಮ್ಮ ಜಾಣ್ಮೆಗೆ. ಅದೇ ಜಾಣತನದ ಜಾಲದೊಳಗೆ ಮಕ್ಕಳ ಒಗ್ಗಟ್ಟನ್ನು ಮುಂದು ಮಾಡಿಕೊಂಡು ಅಂದು ನನ್ನನ್ನು ಬಂಧಿಸಿದಿರಿ. ಅಕಾರಣ ನನಗೂ ಐವರನ್ನು ಅನಿವಾರ್ಯ ಮಾಡಿದಿರಿ ಅಲ್ಲವೇ?'

ಕುಂತಿಗೆ ದ್ರೌಪದಿಯ ಮಾತಿನ ಮೇಲೆ ನಿಗಾ ಇರಲಿಲ್ಲ. ಆವೇಶದಿಂದ ಏರಿಳಿಯುತ್ತಿದ್ದ ಆಕೆಯ ಎದೆಯ ಸೊಗಸು, ನಡೆಯ ಸೊಗಸು, ತಿರುಗಿ ನಿಂತ ದ್ರೌಪದಿಯ ಮೈಮಾಟವನ್ನೇ ನೋಡುತ್ತಿದ್ದಳು. ದೀಪದ ಬೆಳಕು ದ್ರೌಪದಿಯ ಮೈಯನ್ನು ಆವರಿಸಿತ್ತು. ಅಗ್ನಿಪುತ್ರಿ ಸ್ವಯಂಪ್ರಭೆಯಾಗಿದ್ದಳು! ಮಿಂಚಬಳ್ಳಿ ಕೋಣೆಯೊಳಗೆ ಸಂಚರಿಸುತ್ತಿತ್ತು.

'ಈಕೆ ಈ ಮನೆಯ ಸೊಸೆಯಾಗಿ ಬಂದು ಸುಮಾರು ಎರಡು ದಶಕಗಳೇ ಕಳೆಯುತ್ತಾ ಬಂದಿತಲ್ಲವೇ? ಸ್ವಯಂವರ ಮಂಟಪದಿಂದ ಈಗ ಬಂದವಳ ಹಾಗೆಯೇ ಇನ್ನೂ ಕಾಣುತ್ತಿದ್ದಾಳೆ. ಅದೇ ಬಿಗಿಮೈಕಟ್ಟು, ಯೌವನದ ಕಾಂತಿ! ಅಂದು ಅರ್ಜುನನ ಬಳಿ ನಿಂತಿದ್ದವಳ ಮೇಲೆ ಉಳಿದ ನಾಲ್ವರ ಮೋಹದ ಕಣ್ಣೋಟ ಹೇಗೆ ಹಾಯ್ದಿತ್ತು! ನನಗದೆಲ್ಲಾ ಇನ್ನೂ ಚೆಂದ ನೆನಪಿದೆ..'

ಸೊಸೆಯ ಮೈಮಾಟದ ಬಗ್ಗೆ ಯೋಚಿಸುತ್ತಿದ್ದ ಕುಂತಿಗೆ ದ್ರೌಪದಿಯ ಮಾತಿನ ಒಳಾರ್ಥದ ಮೊನಚು ನಾಟಲಿಲ್ಲ. ಕುಂತಿಗೆ ಬೆನ್ನು ತಿರುಗಿಸಿ ನಿಂತ ದ್ರೌಪದಿಗೂ ಅತ್ತೆಯ ಮನಸ್ಸು ತಿಳಿಯಲಿಲ್ಲ.

ದ್ರೌಪದಿ ಈಗ ಸುಖಾಸೀನದ ಬಳಿಯಿದ್ದ ಮತ್ತೊಂದು ಮೆತ್ತೆಯಲಿ ಕುಳಿತುಕೊಳ್ಳುತ್ತಾ, 'ಅತ್ತೇ, ನಿಮ್ಮ ಆ ಐವರು ಪುತ್ರರಿಗೆ ನಾನೇ ಅನಿವಾರ್ಯವಾಗಲಿಲ್ಲ ನೋಡಿ; ಐವರಲ್ಲಿ ಐವರಿಗೂ ಅನುಕೂಲಳಾಗಿ ಉಳಿಯಲಿಲ್ಲ. ಯಾರೊಬ್ಬರೂ ನನ್ನನ್ನು ತಮ್ಮ ಅಂತರಂಗಕ್ಕೆ ಸೇರಿಸಿಕೊಳ್ಳಲಿಲ್ಲ. ಆದರೆ, ನಿಮ್ಮ ಮುಂದೆ, ಲೋಕದ ಮುಂದೆ ಅವರೆಲ್ಲಾ ನನಗೆ ಸರದಾರರೇ! ನನ್ನ ರೂಪು–ಯೌವನಕ್ಕೆ ಅಂಟಿಕೊಂಡ ರಸಿಕರೇ! ಅಂತರ್ಯದಲ್ಲಿ ನಾನು ಮಾತ್ರ ಒಬ್ಬ ಪರಿತ್ಯಕ್ತಳೂ, ಮತ್ತೊಬ್ಬ ವಿಧವೆಯೂ, ಸನ್ಯಾಸಿನಿಯೂ ಆಗಿ ಉಳಿದುಬಿಟ್ಟೆ... ಕ್ಷಮಿಸಿ ಅತ್ತೆ... ನಿಮ್ಮ ಮಕ್ಕಳು ಬದುಕಿರುವಾಗಲೂ ನಿಮ್ಮ ಮುಂದೆಯೇ ನನ್ನನ್ನು ನಾನು ವಿಧವೆ ಎಂದು ಕರೆದುಕೊಂಡುದಕ್ಕೆ...'

ದ್ರೌಪದಿಯ ಕರ್ಣಕಠೋರ ಮಾತುಗಳು ಈಗ ಕುಂತಿಯ ಒಡಲನ್ನು ಇರಿದವು... 'ಏನಾದರೂ ಬದಲು ಹೇಳಿ ಬಾಯ್ಮುಚ್ಚಿಸಬೇಕು' ಎಂದ ಕುಂತಿ ತುಟಿ ಒಡೆಯದಾದಳು.

